

**ಎಡದಿಂದ ಬಲಕ್ಕೆ:**

1. ಕಷಾಯ ಕುಡಿಯಲು ತಕ್ಕ ಸಮಯ–ಮುಂಜಾನೆ (4)
3. ಕೋಡಿನ ಆಕಾರದ ಒಣಗಿ ಹೋದ ಮರ (3)
4. ಕ್ಷೀಣ ಜ್ಯೋತಿ ಕಾಣಿಸಿತು ಭೂಮಿ–ಆಕಾಶ ಸೇರುವಲ್ಲಿ (3)
6. ಗುಡಿಸುವಾಗ ಸಿಕ್ಕಿದ್ದು ಚೂರು ಪಾರು ದುಡ್ಡು (4)
7. ಗಸಗಸೆ ಕುರಿತಂತೆ ಏನೇನೋ ಗುಟ್ಟು ಮಾತು (4)
9. ಶಾಲೆಯ ಪಕ್ಕದಲ್ಲೇ ಅಡುಗೆ ಮನೆ (4)
11. ತುರಗವನ್ನೇರಿ ಹೊರಟವ ಮಧ್ಯೆ ಜೈಲು ಸೇರಿದ (4)
13. ಕಳ್ಳನ ಕೈ ತಾಕಿ ದೋಷಯುಕ್ತವಾಯಿತು (4)
15. ಕರ ಎಳೆದು ಸಂಚರಿಸಹೋದರೆ ಕೇಡು ಖಂಡಿತ (4)
17. ಕಾರು ತಿರುವಲು ನೆರವಾದ ಅಲೆಮಾರಿ (3)
18. ಹೊಣೆ ಅರಿತಿಲ್ಲ ಬಿಡಿ ಜಿಂಕೆ ಹೆಸರಿನವಳು (3)
19. ಪಟ್ಟಣ ಪಟ್ಟಣದಲ್ಲೂ ಗಂಟೆ ಸದ್ದು (4)

**ಮೇಲಿಂದ ಕೆಳಕ್ಕೆ:**

1. ಪಾಂಡವರದೂ ವೇಷ ಹೀಗೇ ತಾನೇ? (3)
2. ಶಿಕ್ಷಿಸುವ ಮೊದಲು ಎಲ್ಲ ಗಮನಿಸು (3)
3. ಕರ್ರಗಿರುವುದಕ್ಕೇ ಸದಾ ಚಿಂತೆಯೇ? (3)
5. ಖಜಾನೆ ಕಾಯುವವನ ತಂದೆ ಗೊತ್ತೇ? (3)
7. ತರಗತಿಯನ್ನು ಸೂಚಿಸುವ ಕುರುಹು ಇದು (3)
8. ಒಳ್ಳೆ ಮನೆಯನ್ನು ಒತ್ತಿದ್ದರೆ ಕೃಷ್ಣ ಭಕ್ತ ಕಂಡಾನು (3)
9. ಕೋಪವನ್ನು ಕಡಿಮೆ ಮಾಡಲು ಸಿಹಿ ಪಾನೀಯ (3)
10. ತೇರೆಳೆಯಲು ಬಂದ ಬಾಲೆ ತಲೆಕೆಳಗು (3)
12. ಗಣ್ಯಾತಿಗಣ್ಯರ ಎಣಿಕೆ ನಡೆದಿದೆ (3)
14. ಲೆಕ್ಕಣಿಕೆಯಿಂದ ನೆನಪಾಗುವ ಲಂಕಾ ರಕ್ಷಕಿ–ರಕ್ಕಸಿ (3)
15. ಸುಂಕ ಕಟ್ಟುವುದೆಂದರೆ ಭಾರೀ ದುಃಖ, ತಳಮಳ (3)
16. ಅಪಹರಣ ಮಾಡಿದ್ದನ್ನೆಲ್ಲ ಅಲ್ಲೇ ಬಿಟ್ಟು ಹೋಗುವುದೇ? (3)

### ಪದಬಂಧ 05-05-2011ರ ಉತ್ತರಗಳು

**ಎಡದಿಂದ ಬಲಕ್ಕೆ:**
1. ಸಂಸದ; 3. ಅಭಿಮತ; 4. ಶತಪದಿ; 6. ಸುಗಂಧ; 7. ದಳಪತಿ; 9. ಸಂಹಾರಕ; 11. ಯಶಸ್ಕರ; 13. ವನವಾಸ; 15. ಕತ್ತಲೆ; 17. ಗಲಿಬಿಲಿ; 18. ಚಾರಿತ್ರಿಕ; 19. ಸುಷಿರ.

**ಮೇಲಿಂದ ಕೆಳಕ್ಕೆ:**
1. ಸಂಶಯಿಸು; 2. ದಶವಿಧ; 3. ಅಸದಳ; 5. ದಿನಕರ; 7. ದಡಿಯ; 8. ತಿಮಿರ; 9. ಸಂಭವ; 10. ಕಲಸ; 12. ಶರವೇಗ; 14. ವಾಸ್ತವಿಕ; 15. ಕದಲಿಸು; 16. ಲೆಕ್ಕಾಚಾರ.

## 'ಸಿಲ್ವರ್ ಬ್ಯಾಕ್'-ಅದೇನು?

'ಸಿಲ್ವರ್ ಬ್ಯಾಕ್'–ಅದು ಗೊರಿಲ್ಲ ಕುಟುಂಬದ ಯಜಮಾನನ ಹೆಸರು; ಅದೊಂದು ರೂಪಾನ್ವಯ ನಾಮ.

ನಿಮಗೇ ತಿಳಿದಿರುವಂತೆ ಗೊರಿಲ್ಲ ಒಂದು ವಾನರ. ವಾನರರ ಐದೂ ವಿಧಗಳಲ್ಲಿ (ಗೊರಿಲ್ಲ, ಚಿಂಪಾಂಜಿ, ಬೋನೋಬೋ, ಒರಾಂಗೊಟಾನ್ ಮತ್ತು ಗಿಬ್ಬನ್) ಗಾತ್ರದಲ್ಲಿ, ಶಕ್ತಿಯಲ್ಲಿ ಗೊರಿಲ್ಲಗಳದೇ ಪ್ರಥಮ ಸ್ಥಾನ. ಆಫ್ರಿಕ ಖಂಡದ ವೃಷ್ಟಿ ವನಗಳ ಕೆಲವೇ ಪ್ರದೇಶಗಳಿಗೆ ಸೀಮಿತವಾಗಿರುವ ಈ ವಾನರರದು ಗುಂಪು ಜೀವನ ಕ್ರಮ. ಪ್ರತಿ ಗುಂಪೂ ಒಂದು ಕುಟುಂಬ. ಅಂಥ ಪ್ರತಿ ಕುಟುಂಬದಲ್ಲೂ ಹತ್ತು–ಹನ್ನೆರಡು ಸದಸ್ಯರು. ಕೆಲವು ವಯಸ್ಕ ಹೆಣ್ಣುಗಳು, ಅವುಗಳ ಮರಿಗಳು ಹಾಗೂ ಅಪರೂಪವಾಗಿ ಒಂದೆರಡು ಪ್ರೌಢ ಗಂಡುಗಳೂ ಇರುವ ಪ್ರತಿ ಕುಟುಂಬಕ್ಕೂ ಒಂದೇ ಒಂದು ವಯಸ್ಕ ಗಂಡು ಯಜಮಾನ. ಹನ್ನೆರಡು ವರ್ಷಕ್ಕಿಂತ ಅಧಿಕ ವಯಸ್ಸಿನ ಈ ಮುಂದಾಳಿನದು ಆರಡು ಎತ್ತರ; ಇನ್ನೂರು ಕಿಲೋ ತೂಕ. ಇಡೀ ಕುಟುಂಬದಲ್ಲಿ ಯಜಮಾನನದೇ ಗರಿಷ್ಠ ಗಾತ್ರ. ಅದೇ ಅತ್ಯಂತ ಶಕ್ತ, ಸಮರ್ಥ, ಧೈರ್ಯವಂತ. ಕುಟುಂಬದ ಎಲ್ಲ ಸದಸ್ಯರದೂ ಯಜಮಾನನೊಡನೆ ಅತ್ಯಂತ ವಿನೀತ, ವಿಧೇಯ ನಡೆವಳಿಕೆ.

ಈ ಸ್ಥಾನ–ಮಾನಗಳು ಜಾಹೀರುಗೊಳ್ಳುವಂತೆ ಗೊರಿಲ್ಲ ಯಜಮಾನನಿಗೆ ನಿಸರ್ಗದಿಂದಲೇ ಒಂದು ವಿಶಿಷ್ಟ ಲಕ್ಷಣ ಪ್ರದಾನ. ಅದರ ಬೆನ್ನಿನ ಮೇಲಿನ ಕೂದಲುಗಳು ಬೆಳ್ಳಿಯಂತೆ ಬಿಳುಪಾಗಿರುತ್ತವೆ. (ನರೆಗೂದಲಲ್ಲ) ನೋಡಿದೊಡನೆಯೇ ಎದ್ದು ಕಾಣುವ ಈ ಲಕ್ಷಣದಿಂದಾಗಿ ಈ ವಿಶೇಷ ಹೆಸರು: 'ಸಿಲ್ವರ್ ಬ್ಯಾಕ್'. ಯಾವುದೇ ಗೊರಿಲ್ಲ ಕುಟುಂಬದಲ್ಲೂ ಒಂದೇ ಒಂದು ಸಿಲ್ವರ್ ಬ್ಯಾಕ್‌ಗೆ ಸ್ಥಾನ. ಇತರ ವಯಸ್ಕ ಗಂಡುಗಳಿದ್ದರೂ ಅವುಗಳದು ಹನ್ನೆರಡು



ವರ್ಷಕ್ಕೂ ಕಡಿಮೆ ವಯಸ್ಸು; ಕಪ್ಪಾಗಿಯೇ ಇರುವ ಬೆನ್ನು. ಆಕಸ್ಮಿಕವಾಗಿ ಒಂದೇ ಕುಟುಂಬದಲ್ಲಿ ಎರಡು ಸಿಲ್ವರ್ ಬ್ಯಾಕ್‌ಗಳಾದರೆ ಅವುಗಳ ನಡುವೆ ಯಾಜಮಾನ್ಯಕ್ಕೆ ಕಚ್ಚಾಟ ಖಚಿತ. ಸಮರದಲ್ಲಿ ಸೋಲುವ ಸಿಲ್ವರ್ ಬ್ಯಾಕ್ ಕುಟುಂಬವನ್ನು ತೊರೆಯಬೇಕಾಗುವುದು ನಿಶ್ಚಿತ.

ಗುಂಪಿನ ಯಜಮಾನನಾದ್ದರಿಂದ ಸಿಲ್ವರ್ ಬ್ಯಾಕ್‌ಗೇ ಸರ್ವಾಧಿಕಾರ; ಪ್ರಥಮ ಆದ್ಯತೆ. ಜೊತೆಗೆ ಅದರ ಹೊಣೆಗಾರಿಕೆಗಳೂ ಬಹಳ: 'ಇಡೀ ಕುಟುಂಬವನ್ನು ರಕ್ಷಿಸುವುದು, ಒಗ್ಗಟ್ಟು ಕಾಪಾಡುವುದು, ಸದಸ್ಯರ ಕಲಹ–ವೈಮನಸ್ಯಗಳನ್ನು ನಿವಾರಿಸುವುದು, ಸಮೃದ್ಧ ಆಹಾರ ತಾಣಗಳಿಗೆ ಕುಟುಂಬವನ್ನು ಕರೆದೊಯ್ಯುವುದು ಇತ್ಯಾದಿ.' ಹಾಗೆಲ್ಲ ಆದ್ದರಿಂದಲೇ ಪ್ರತಿ ಗೊರಿಲ್ಲ ಕುಟುಂಬದ ಕೇಂದ್ರಬಿಂದುವೂ ಅದೇ 'ಸಿಲ್ವರ್ ಬ್ಯಾಕ್.' ಎಂಥ ಲಕ್ಷಣ!